ವಿಷಯ:- ರಾಜ್ಯದ ರೇಷ್ಮೆ ಆಮದು ಕುರಿತು.

1098 (2059) **ಶ್ರೀ. ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):-** ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯಕ್ಕೆ ಹೊರದೇಶಗಳಿಂದ ಒಂದು ತಿಂಗಳಿಗೆ ಎಷ್ಟು ರೇಷ್ಮೆಯನ್ನು ಆಮದು ಮಾಡಿಕೊಳ್ಳಲಾಗುತ್ತಿದೆ?

ಆ) ಈ ರೀತಿ ಆಮದು ಮಾಡಿಕೊಳ್ಳುತ್ತಿರುವುದರಿಂದ ರಾಜ್ಯದ ರೈತರಿಗೆ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ನಷ್ಟವನ್ನು ತುಂಬಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು):-

ಅ) ಕಚ್ಚಾ ರೇಷ್ಮೆ ಆಮದು ಕೇಂದ್ರ ಸರ್ಕಾರದ ನೀತಿಯಾಗಿರುತ್ತದೆ. ಆದ್ದರಿಂದ ರಾಜ್ಯಕ್ಕೆ ಹೊರದೇಶಗಳಿಂದ ಬರುವ ಆಮದು ರೇಷ್ಮೆ ಪ್ರಮಾಣದ ನಿರ್ವಹಣೆಯೂ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ.

ಆ) ಹೌದು.

ಇ) ಕಚ್ಚಾ ರೇಷ್ಮೆಯ ಆಮದನ್ನು ಸಂಪೂರ್ಣವಾಗಿ ನಿಷೇದಿಸಲು ಅಥವಾ 2ಎ ಗ್ರೇಡ್ ಅಥವಾ ಅದಕ್ಕಿಂತ ಹೆಚ್ಚಿನ ಗುಣಮಟ್ಟವಿರುವ ರೇಷ್ಮೆಯನ್ನು ಮಾತ್ರ ಆಮದು ಮಾಡಿಕೊಳ್ಳುವಂತೆ ಕೇಂದ್ರ ಸರ್ಕಾರವನ್ನು ಆಗಿಂದಾಗ್ಗೆ ಆಗ್ರಹ ಪಡಿಸಲಾಗುತ್ತಿದೆ.

ವಿಷಯ:- ರಾಜ್ಯದಲ್ಲಿ ರೋಗಗ್ರಸ್ತ ಸಣ್ಣ ಕೈಗಾರಿಕಾ ಘಟಕಗಳ ಪುನಃಶ್ಚೇತನ

1099 (1750) **ಶ್ರೀ ಬಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):-** ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ಸಣ್ಣ ಕೈಗಾರಿಕಾ ಘಟಕಗಳಿವೆ.

ಆ) ಇವುಗಳಲ್ಲಿ ಸರ್ಕಾರದ ಸ್ವಾಮ್ಯದ ಎಷ್ಟು ಘಟಕಗಳಿವೆ ಮತ್ತು ಖಾಸಗಿ ಸ್ವಾಮ್ಯದ ಘಟಕಗಳೆಷ್ಟು?

ಇ) ಸರ್ಕಾರಿ ಸ್ವಾಮ್ಯದ ಸಣ್ಣ ಕೈಗಾರಿಕೆಗಳಲ್ಲಿ ಎಷ್ಟು ಜನ ಕಾರ್ಮಿಕರಿದ್ದಾರೆ? ಖಾಸಗೀ ಸ್ವಾಮ್ಯದ ಘಟಕಗಳಲ್ಲಿ ಎಷ್ಟು ಜನ ಕಾರ್ಮಿಕರಿದ್ದಾರೆ?

ಈ) ಸರ್ಕಾರಿ ಸ್ವಾಮ್ಯದ ಎಷ್ಟು ಸಣ್ಣ ಕೈಗಾರಿಕೆ ಘಟಕಗಳು ನಷ್ಟ ಅನುಭವಿಸುತ್ತಿವೆ. ಇದಕ್ಕೆ ಕಾರಣಗಳೇನು?

ಉ) ಇವುಗಳಲ್ಲಿ ರೋಗಗ್ರಸ್ತ ಘಟಕಗಳೆಷ್ಟು? ಇಂತಹ ರೋಗಗ್ರಸ್ತ ಘಟಕಗಳಿಗೆ ಪುನಃಶ್ಚೇತನ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):-

ಅ) ರಾಜ್ಯದಲ್ಲಿ 1996ರ ಮೇ ಅಂತ್ಯದವರೆಗೆ ಒಟ್ಟು 1,76,687 ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕಾ ಘಟಕಗಳಿವೆ.

ಆ) ಈ ಎಲ್ಲ ಘಟಕಗಳು ಖಾಸಗಿ ಸ್ವಾಮ್ಯದ್ದಾಗಿರುತ್ತವೆ.

ಇ) ಎಲ್ಲಾ ಘಟಕಗಳು ಖಾಸಗಿ ಸ್ವಾಮ್ಯದ್ದಾಗಿವೆ. ಈ ಘಟಕಗಳಲ್ಲಿ ಒಟ್ಟು 11,55,180 ಜನ ಉದ್ಯೋಗಸ್ಥರಿದ್ದಾರೆ.

ಈ) ಅನ್ವಯಿಸುವುದಿಲ್ಲ.

ಉ) ಭಾರತೀಯ ರಿಸರ್ವ ಬ್ಯಾಂಕಿನ ಮಾಹಿತಿ ಪ್ರಕಾರ ದಿ: 31-1-95ರ ಅಂತ್ಯಕ್ಕೆ 13,950 ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ರೋಗಗ್ರಸ್ತ ಘಟಕಗಳೆಂದು ಗುರುತಿಸಲಾಗಿದೆ. ರಾಜ್ಯ ಸರ್ಕಾರದ ಒಂದು ರಾಜ್ಯಮಟ್ಟದ ಪುನಃಶ್ಚೇತನ ಸಮಿತಿಯನ್ನು ಬೀಜಧನ ಮಂಜೂರಾತಿ ಮತ್ತು ಶಿಫಾರಸ್ಸಿಗಾಗಿ ರಚಿಸಿದೆ. ಇದುವರೆವಿಗೆ 327 ರೋಗಗ್ರಸ್ತ ಘಟಕಗಳಿಗೆ ಒಟ್ಟು ರೂ. 1,08,78,650ಗಳ ಬೀಜಧನ ಮಂಜೂರು ಮಾಡಿ ಪುನಃಶ್ಚೇತನಗೊಳಿಸಲಾಗಿದೆ.

ವಿಷಯ:- ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆ.

1100 (804) **ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-** ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಯಾವಾಗ ಹಾಗೂ ಎಲ್ಲಿ ನಿರ್ಮಿಸಲಾಗುವುದು?

ಆ) ದೇವನಹಳ್ಳಿ ರಸ್ತೆಯಲ್ಲಿ ಈ ವಿಮಾನ ನಿಲ್ದಾಣವನ್ನು ಯೋಚಿಸಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲಗಳ ಅಭಿನೃದ್ಧಿ ಸಚಿವರು):-

ಅ) ಅಂತರರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣವನ್ನು ದೇವನಹಳ್ಳಿ ತಾಲ್ಲೂಕು ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನ ಒಟ್ಟು 14 ಗ್ರಾಮಗಳ ಜಮೀನಿನಲ್ಲಿ ಸ್ಥಾಪಿಸಲಾಗುವುದು. ಟಾಟಾ ಸಮೂಹವು ತಿಳಿಸಿರುವ ವೇಳಾಪಟ್ಟಿಯ ಪ್ರಕಾರ ಕೆಲಸ ಪ್ರಾರಂಭಿಸಿದ 36 ತಿಂಗಳೊಳಗಾಗಿ ಅಂದರೆ 1996ರ ಸಮಯದಲ್ಲಿ ಸರಕು ಸಾಗಾಣಿಕೆಯನ್ನು ಮತ್ತು ಆ ನಂತರ 12 ತಿಂಗಳೊಳಗಾಗಿ ಅಂದರೆ 2000 ಇಸವಿಯ ಸಮಯದಲ್ಲಿ ನಾಗರೀಕ ಸಂಚಾರವನ್ನು ವಿಮಾನ ನಿಲ್ದಾಣವು ಕೈಗೊಳ್ಳುವುದು.

ಆ) ಇದಕ್ಕಾಗಿ ಭಾರತ ಸರ್ಕಾರವು ನೇಮಿಸಿದ ರಾಮನಾಥನ್ ಸಮಿತಿಯ ವರದಿಯ ಆಧಾರದ ಮೇಲೆ ಇಲ್ಲಿ ಈ ವಿಮಾನ ನಿಲ್ದಾಣವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.